



# ಶ್ರೀನಿವಾಸ ಉಡುಪ ಅವರ ಪದ್ಯಗಳು



ಅಂಕಣ ಹಾಗೂ ಸಹೃದಯಿ ವಿಮರ್ಶಾ ಬರಹಗಳ ಮೂಲಕ ಸಹೃದಯರಿಗೆ ಪರಿಚಿತರಾದ ಶ್ರೀನಿವಾಸ ಉಡುಪ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ದೊಡ್ಡದು. 'ಹಿಡಿಂಬನ ತೋಟ', 'ಗೂಬಜ್ಜಿಯ ಗೊರಕೆ', 'ಕುಂಭಕರ್ಣನ ನಿದ್ದೆ', 'ಪಾಪು ಪದ್ಯಗಳು', 'ಕನ್ನಡನಾಡಿನ ಕೂಸುಮರಿ' ಅವರ ಕೆಲವು ಪ್ರಸಿದ್ಧ ಮಕ್ಕಳ ಕೃತಿಗಳು. ಕಳೆದ ಏಪ್ರಿಲ್ 11ರಂದು ನಿಧನರಾದ ಉಡುಪರಿಗೆ ಶ್ರದ್ಧಾಂಜಲಿಯ ರೂಪದಲ್ಲಿ, ಪ್ರಕಟಣೆಯ ಹಂತದಲ್ಲಿರುವ ಅವರ ಸಂಕಲನದಿಂದ ಆಯ್ದ ಪದ್ಯಗಳು ಇಲ್ಲಿವೆ.



## ಚೆಂಡಿನ ಅಳಲು

ಯಾಕಪ್ಪಾ ನಂಗಿಂಥಾ ಶಿಕ್ಷೆ ಕೊಟ್ಟೆ ಭಗವಂತಾ?
ಮೂರು ಹೊತ್ತೂ ಒದೆತಾ ಹೊಡೆತಾ ತಿಂತಾ ಇರು ಅಂತಾ!

ಫುಸ್‌ಫುಸ್ ಎಂದು ಗಾಳಿ ತುಂಬಿಸಿ 'ಫುಟ್‌ಬಾಲ್' ಅಂತಾರೆ
ಎರ್ರಾಬಿರ್ರಿ ಒದೆದೂ ಒದೆದೂ ಜೀವಾನೆ ತಿಂತಾರೆ!

ಸುಸ್ತಾಗಿ ನಾ ಮೂಲೆ ಸೇರಿದರೆ 'ಗೋಲ್, ಗೋಲ್' ಅಂತಾರೆ
ಮತ್ತಲ್ಲಿಂದ ಹೊರಕ್ಕೆ ಎಳೆದು ಗೋಳು ಹೊಯ್ತಾರೆ!

'ಕ್ರಿಕೆಟ್' ಅಂತ ಬ್ಯಾಟಲಿ ನಂಗೆ ಫಟಾರ್ ಬಡೀತಾರೆ
ನೋವು ತಾಳದೆ ದೂರ ಓಡಿದರೆ, ಸಿಳ್ಳೆ ಹೊಡೀತಾರೆ!

ನೆಟ್ಟನು ಕಟ್ಟಿ ಆ ಕಡೆ ಈ ಕಡೆ ತಳ್ಳಿ ಕುಣೀತಾರೆ
ನೆಲದಲ್ಲಿರಿಸಿ 'ಹಾಕೀ!' ಎಂದು ದೊಣ್ಣೇಲಿ ಬಡಿತಾರೆ!

ಇಷ್ಟೊಂದ್ ಶಿಕ್ಷೆ ನಂಗೊಬ್ಬನಿಗೇ ಯಾಕೋ ಗೊತ್ತಿಲ್ಲ!
ದೊಡ್ಡಾಗಿದ್ರೂ ಚಿಕ್ಕಾಗಿದ್ರೂ ನೋವು ತಪ್ಪೋಲ್ಲ!

ಯಾರಿಗೂ ಬೇಡ ಇಂಥಾ ಗೋಳು, ಅಯ್ಯೋ ಭಗವಂತಾ!
ಯಾರು ಹೊಗಳಿದರೋ ನಿನ್ನನು ಭಾಳ 'ಕರುಣಾಕರ' ಅಂತಾ?!